# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

MD RGRHCL 01 GEN 60 2002 / 14460. Date: 19.01.2012

ರಿಗೆ,

ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ,
ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಜಿಲ್ಲಾ ಪಂಚಾಯತಿ,
ಎಲ್ಲಾ ತಾಲ್ಲೂಕುಗಳ ಕಾರ್ಯನಿರ್ವಹಣಾಧಿಕಾರಿಗಳಿಗೆ, ತಾಲ್ಲೂಕು ಪಂಚಾಯಿತಿ,
ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು, ತಾಲ್ಲೂಕು ಕಛೇರಿ,
ಎಲ್ಲಾ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಮುಖ್ಯಾಧಿಕಾರಿಗಳಿಗೆ.

ಮಾನ್ಯರೇ,

ವಿಷಯ: : ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳ ಆಯ್ಕೆಗೆ ವಾರ್ಷಿಕ ಆದಾಯದ ಗರಿಷ್ಟ ಮಿತಿಯನ್ನು ರೂ. 32,000/-ಗಳಿಗೆ ಹೆಚ್ಚಿಸಿರುವ ಬಗ್ಗೆ.

ಉಲ್ಲೇಖ 1 ನಿಗಮದ ಪ್ರಸ್ತಾವನೆ ಪತ್ರಗಳ ಸಂಖ್ಯೆ: MD RGRHCL 01 GEN 55, 57, 58, 59 2002, Dated: 14.07.2011, 12.09.2011, 23.09.2011, 24.11.2011

2 ಸರ್ಕಾರದ ಆದೇಶ ಸಂಖ್ಯೆ:ವಇ/137/ಹೆಚ್‌ಎಎಂ/2011, ದಿನಾಂಕ: 19.01.2012

--------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಿಳಿಸಬಯಸುವುದೇನೆಂದರೆ, ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳ ಆಯ್ಕೆಗೆ, ವಾರ್ಷಿಕ ಆದಾಯ ಮಿತಿಯನ್ನು ಸರ್ಕಾರವು ತನ್ನ ಆದೇಶ ಸಂಖ್ಯೆ ಹೆಚ್‌ಯುಡಿ.ಹೆಚ್‌ಎಹೆಚ್ (1) 95, ಬೆಂಗಳೂರು, ದಿನಾಂಕ: 04.08.1995 ರಲ್ಲಿ ರೂ. 11,800/-ಗಳೆಂದು ನಿಗದಿಪಡಿಸಿ ಆದೇಶ ಹೊರಡಿಸಿ ಸುಮಾರು 16 ವರ್ಷಗಳಾಗಿರುವುದರಿಂದ ಇತ್ತೀಚಿನ ದಿನಗಳಲ್ಲಿ ಫಲಾನುಭವಿಗಳ ಈಗಿನ ಆರ್ಥಿಕ ಸ್ಥಿತಿಗತಿಗಳ ಕನಿಷ್ಟ ಸುಧಾರಣೆಗಳಿಂದ ಈ ಆದಾಯ ಮಿತಿಯನ್ನು ಹೊಂದಿರುವ ಕುಟುಂಬಗಳನ್ನು ಗುರ್ತಿಸುವುದು ಕಷ್ಟಕರವಾಗಿದೆಯೆಂದು ಹಾಗೂ ಅನೇಕ ಕುಟುಂಬಗಳು ವಸತಿ ಸೌಲಭ್ಯದಿಂದ ವಂಚಿತರಾಗುತ್ತಿರುವುದನ್ನು ಗಮನಿಸಿ ಈ ಆದಾಯ ಮಿತಿಯನ್ನು ಹೆಚ್ಚಿಸಬೇಕೆಂದು, ಅನೇಕ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕೋರಿದ ಹಿನ್ನೆಲೆಯಲ್ಲಿ ಉಲ್ಲೇಖ ಪತ್ರ (1)ರಲ್ಲಿ ತಿಳಿಸಿರುವ ದಿನಾಂಕಗಳಂದು ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿತ್ತು.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು, ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ, ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ವಸತಿ ಹಾಗೂ ನಿವೇಶನ ಯೋಜನೆಗಳಡಿ, ಈಗಿನ ಸ್ಥಿತಿಗತಿಗೆ ಅನುಗುಣವಾಗಿ ಫಲಾನುಭವಿಗಳ ವಾರ್ಷಿಕ ಆದಾಯ ಮಿತಿಯನ್ನು ಪರಿಷ್ಕರಿಸಿ ಗರಿಷ್ಟ ಆದಾಯ ಮಿತಿಯನ್ನು ರೂ. 32,000/-ಗಳೆಂದು (ರೂ. ಮೂವತ್ತೆರಡು ಸಾವಿರಗಳು ಮಾತ್ರ) ನಿಗದಿಪಡಿಸಿ ಆದೇಶ ಹೊರಡಿಸಿರುತ್ತದೆ.

ಸದರಿ ಆದೇಶದಂತೆ ಎಲ್ಲಾ ವಸತಿ ಯೋಜನೆಗಳಡಿ ಹಾಗೂ ಎಲ್ಲಾ ನಿವೇಶನ ಯೋಜನೆಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಆದಾಯ ಮಿತಿಯನ್ನು ಗರಿಷ್ಟ ರೂ. 32,000/-ಕ್ಕೆ ಹೆಚ್ಚಿಸಿದ್ದು, ಈ ಆದೇಶವು 2010-11ನೇ ಸಾಲಿನಿಂದ ಮುಂದುವರೆದ ವಿವಿಧ ವಸತಿ ಯೋಜನೆಗಳಡಿ ಈಗಾಗಲೇ ಆಯ್ಕೆಯಾಗಿರುವ ಮತ್ತು ಮುಂದೆ ಆಯ್ಕೆ ಮಾಡುವ ಫಲಾನುಭವಿಗಳಿಗೆ ಅನ್ವಯವಾಗುತ್ತದೆ. ಅದರಂತೆ ಗರಿಷ್ಟ ರೂ. 32000/-ದವರೆಗೆ ಆದಾಯ ಹೊಂದಿರುವ ಕುಟುಂಬಗಳನ್ನು ವಿವಿಧ ಯೋಜನೆಗಳಡಿ ನಿಗದಿಪಡಿಸುವ ನಿಯಮಾವಳಿಗಳ ಮೇರೆಗೆ ಆಯ್ಕೆ ಮಾಡಿ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲು ಈ ಮೂಲಕ ಎಲ್ಲಾ ಅನುಷ್ಠಾನಾಧಿಕಾರಿಗಳನ್ನು ಕೋರಲಾಗಿದೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,

N. S. [signature]

ಎನ್. ಎಸ್. ಮಹಾದೇವ ಪ್ರಸಾದ್
ವ್ಯವಸ್ಥಾಪಕ ನಿರ್ದೇಶಕರು (ಪ್ರಭಾರ)



ನೊಂದಾಯಿತ ಕಛೇರಿ : #1,2,3,4, ಐ.ಟಿ. ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು – 560 010.
ಕಛೇರಿ : 91-80-2311 8888, Extn.: ಪಿಐ ವಿಭಾಗ- 25 to 30, ತಾಂತ್ರಿಕ - 34 to 36, ಆರ್ಥಿಕ - 37 to 40, ಆಡಳಿತ - 42 & 43, ಗಣಕ ವಿಭಾಗ- 45 to 47,